ಸೇರಿದ್ದಾ, ಇನ್ನೂ ಬ್ಬರು ಹಿಂದೂಗಳಲ್ಲೇ ಯಾವುದಾದರೂ ಒಂದು ಜಾತಿಗೆ ಸೇರಿರಬೇಕೆಂದು ಇದೆಯೋ ಅಥವಾ ಬೇರೆ ಯಾವುದಾದರೂ ಮತಕ್ಕೆ ಸೇರಿರಬೇಕೆಂದು ಇದೆಯೋ ?

ಶ್ರೀ ಜಿ. ಬಸವಣ್ಣಪ್ಪ.—ಅದನ್ನು ಎಕ್ಸಾಮಿನ್ ಮಾಡುತ್ತೇನೆ.

ಶ್ರೀ ಎಂ. ವಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಭೂಪತಿಯವರು ಕೇಳಿದ್ದರಲ್ಲಿ ಅರ್ಥ ಇದೆ. ಇದನ್ನು ಬಹಳ ಸುಲಭವಾಗಿ ಸಚಿವರು ಪರಿಹಾರ ಮಾಡಬಹುದು. ಬಹಳಷ್ಟು ಕಡೆ ಈ ರೀತಿ ಆಗಿದೆ. ಇನ್ನೂ ಕರೆಸ್ಪಾಂಡೆನ್ಸ್ ಆಗುತ್ತಾ ಇದೆ ಎಂದು ಹೇಳುತ್ತಿದ್ದಾರೆ ತಾವು ವಿವರಗಳನ್ನು ತರಿಸಿಕೊಂಡು ನಾಳೆ ನಾವಿದ್ದರಲ್ಲಿ ಉತ್ತರ ಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು.—ಎಕ್ಸಾಮಿನ್ ಮಾಡುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಜಿ. ಬಸವಣ್ಣಪ್ಪ.—ಹೌದು, ಮಾಡುತ್ತೇನೆ.

ಅರಸೀಕೆರೆ ತಾಲ್ಲೂಕಿನಲ್ಲಿರುವ ಉಣ್ಣೆ ಕೈಮಗ್ಗ ನೇಕಾರರ ಸಹಕಾರ ಉತ್ಪನ್ನ ಹಾಗೂ ಮಾರಾಟ ಸಂಘ

ಶ್ರೀ (ಉ) ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಅರಸೀಕೆರೆ ತಾಲ್ಲೂಕು ಕೆಂಕೆರೆ ಗ್ರಾಮದಲ್ಲಿ ದಿ ಉಲನ್ ಹ್ಯಾಂಡ್‌ಲೂಮ್ ಕೋ ಆಪ ರೇಟಿವ್ ಅಂಡ್ ಸೇಲ್ಸ್ ಸೊಸೈಟಿ ಎಂಬ ಸಂಘ ಇದೆಯೇ ?

ಆ) ಈ ಸಂಘವನ್ನು ಸರ್ಕಾರವು ರದ್ದುಗೊಳಿಸಿರುವುದು ನಿಜವೇ ?

ಇ) ಚುನಾಯಿತ ಅಧ್ಯಕ್ಷರು ಮತ್ತು ಚುನಾಯಿತ ಆಡಳಿತ ಸಮಿತಿಯು ಸಂಘವನ್ನು ಯಾವುದೇ ಅವ್ಯವಹಾರಗಳಿಲ್ಲದೆ ಲಾಭದಾಯಕವಾಗಿ ನಡೆಸುತ್ತಿದ್ದರೂ ಈ ಸಂಘವನ್ನು ಸರಕಾರವು ರದ್ದುಗೊಳಿಸಿ ಆಡಳಿತಾಧಿಕಾರಿಗಳನ್ನು ನೇಮಿಸಲು ಕಾರಣವೇನು ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

ಅ) ಇದೆ

ಆ) ಹಾಸನ ಜಿಲ್ಲೆಯ ಸಹಕಾರ ಸಂಘಗಳ ಉಪ ನಿಬಂಧಕರು ಈ ಸಂಘದ ಆಡಳಿತ ಮಂಡಳಿಯನ್ನು ರದ್ದುಗೊಳಿಸಿರುವುದು ನಿಜ.

ಇ) ಆಡಳಿತ ಮಂಡಳಿಯ ಮೇಲೆ ಆರೋಪಗಳು ರುಜುವಾತಾದುದರಿಂದಲೇ ಸಹಕಾರ ಸಂಘಗಳ ಉಪನಿಬಂಧಕರು ಕ್ರಮತೆಗೆದುಕೊಂಡಿರುತ್ತಾರೆ ಸಂಘವು ಕಳೆದ ಎರಡು ವರ್ಷಗಳಿಂದ ಸ್ಥಗಿತ ಗೊಂಡಿದ್ದು ನಷ್ಟವನ್ನೂ ಸಹ ಅನುಭವಿಸಿರುತ್ತದೆ.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ. ದಿ ಉಲ್ಲನ್ ಹ್ಯಾಂಡ್‌ಲೂಮ್ ವೀವರ್ಸ್ ಕೋ-ಆಪ ರೇಟಿವ್ ಪ್ರೊಡಕ್ಷನ್ ಅಂಡ್ ಸೇಲ್ಸ್ ಸೊಸೈಟಿ ಏನು ಇದೆ, ಈ ಸಂಘ ವೀವರ್ಸ್ ಹಿತದೃಷ್ಟಿಯಿಂದ ಇರತಕ್ಕಂಥ ಸಂಘ, ಈ ಸಂಘದ ಮೇಲೆ ಆರೋಪ ರುಜುವಾತಾಗಿದೆಯೇ? ಅಲ್ಲಿನ ಆಡಳಿತ ಮಂಡಲಿಯನ್ನು ರದ್ದು ಮಾಡುವುದಕ್ಕೆ ಕಾರಣಗಳೇನು ? ಮತ್ತು ಆ ಸಂಘದ ಮೇಲೆ ಇರುವ ಆರೋಪಗಳ ಮೇಲೆ ಯಾವ ಕ್ರಮ ಕೈಗೊಂಡಿದ್ದೀರಿ ? ಏನೇನು ಆರೋಪಗಳು ರುಜುವಾತಾಗಿವೆ ? ಆ ಆರೋಪಗಳ ಸ್ವರೂಪಗಳಾವುವು ?

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ಈ ಸಂಘ ಕಳೆದ ಎರಡು ವರ್ಷಗಳಿಂದ ಕೆಲಸ ಮಾಡದ ಕಾರಣ ಸುಮಾರು ೩೩,೫೦೦ ರೂಪಾಯಿಗಳ ನಷ್ಟವಾಗಿದೆ. ೧೯೮೨-೮೩ನೇ ಸಾಲಿನ ಆಡಿಟ್ ರಿಪೋರ್ಟ್ ಪ್ರಕಾರ ಆ ಸಂಘದ ಅಧ್ಯಕ್ಷರಿಂದ ೪೭,೫೨೩ ರೂಪಾಯಿಗಳು ಬರಬೇಕು. ಆದ್ದರಿಂದ ಅವರ ಮೇಲೆ ಈಗಾಗಲೇ ಸಿವಿಲ್ ಕೇಸ್ ಹಾಕಿದ್ದೇವೆ ಕ್ರಿಮಿನಲ್ ಕೇಸ್ ಹಾಕುವುದಕ್ಕೆ ಆದೇಶ ಕೊಟ್ಟಿದ್ದೇನೆ ಅವರಿಗೆ ಸುಮಾರು ೧೨ ಸಾವಿರ ರೂಪಾಯಿಗಳ ವರ್ಕಿಂಗ್ ಕ್ಯಾಪಿಟಲ್ ಕೊಟ್ಟಿದ್ದೇವೆ, ಸರ್ವೆ

ನಂಬರು ೩೦೭ ರಲ್ಲಿ ೧೭ ಗುಂಟೆ ಜಮೀನನ್ನು ವೀವರ್ಸ್ ಕೋ-ಆಪರೇಟೀವ್ ಸಂಘಕ್ಕೆ ಆಕ್ವೈರ್ ಮಾಡಿದ್ದೇವೆ.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ, ಆ ಸಂಘಕ್ಕೆ ಚುನಾವಣೆ ಯಾವಾಗ ಮಾಡುತ್ತೀರಿ ? ಆ ಸಂಘಕ್ಕೆ ಸೇರಿದ ಸುಮಾರು ೪೦೦ ಎಕರೆ ಜಮೀನನ್ನು ಯಾವಾಗ ಸ್ವಾಧೀನ ಪಡಿಸಿಕೊಳ್ಳುತ್ತೀರಿ?

ಶ್ರೀ ಆರ್. ಎಲ್. ಜಾಲಪ್ಪ.—೪೦೦ ಎಕರೆ ಜಮೀನು ಇರುವ ವಿಷಯ ನನಗೆ ಗೊತ್ತಿಲ್ಲ. ಜಮೀನು ನಿದ್ದರೆ ಸ್ವಾಧೀನಪಡಿಸಿಕೊಳ್ಳುತ್ತೇವೆ. ಇನ್ನು ಚುನಾವಣೆ ಮಾಡಿ ಎಂದು ಹೇಳಿದ್ದಾರೆ, ಆದಷ್ಟು ಬೇಗ ಚುನಾವಣೆ ಮಾಡಿಸುತ್ತೇವೆ.

ಮಹಿಳಾ ಮಂಡಲದ ಬಗ್ಗೆ

೭೫೫. ಶ್ರೀಮತಿ ಸಂಪಾ ವಸಂತ್ (ವೀರಾಜಪೇಟೆ) ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಮಹಿಳಾ ಮಂಡಲಗಳ ಸಂಖ್ಯೆ ಎಷ್ಟು ? ಹಾಗೂ ಯಾವ ಯಾವ ಊರಿನಲ್ಲಿ ಎಷ್ಟೆಷ್ಟು ಮಹಿಳಾ ಮಂಡಲಗಳಿವೆ. ಒಂದು ಮಹಿಳಾ ಮಂಡಲಕ್ಕೆ ಒಂದು ತಿಂಗಳಿಗೆ ಖರ್ಚಾಗುವ ಹಣವೆಷ್ಟು?

ಆ) ಹರಿಜನ ಮಕ್ಕಳ ಬಾಲವಾಡಿ ಸಂಖ್ಯೆ ಎಷ್ಟು?

ಶ್ರೀ ಜಿ. ಬಸವಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ರಾಜ್ಯದಲ್ಲಿ ಒಟ್ಟು ೮೧೬ ಮಹಿಳಾ ಮಂಡಲಗಳು ಇವೆ. ಅವುಗಳಲ್ಲಿ ೫೪೨ ಮಹಿಳಾ ಮಂಡಲಗಳು ನೋಂದಾಯಿತವಾಗಿವೆ. ಉಳಿದ ೨೬೭ ಮಹಿಳಾ ಮಂಡಲಗಳು ನೋಂದಾಯಿತವಾಗದೆ ಕಾರ್ಯ ನಿರ್ವಹಿಸುತ್ತಿವೆ. ತಾಲ್ಲೂಕು ಪ್ರದೇಶಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಹಿಳಾ ಮಂಡಲಗಳ ಸೂಚಿಯನ್ನು ಅನುಬಂಧ—ಅ ನಲ್ಲಿ ಪ್ರತ್ಯೇಕವಾಗಿ ತೋರಿಸಲಾಗಿದೆ.

ಒಂದು ಮಹಿಳಾ ಮಂಡಲಕ್ಕೆ (ನೋಂದಾಯಿಸಲ್ಪಟ್ಟ ಅರ್ಹ) ವಾರ್ಷಿಕವಾಗಿ ರೂ. ೯೮೬-೦೦ ಗಳನ್ನು ನಿರ್ವಹಣಾ ಭತ್ಯವಾಗಿ ನೀಡಲಾಗುವುದು.

ಆ) ಹರಿಜನ ಮಕ್ಕಳಿಗಾಗಿ ಪ್ರತ್ಯೇಕವಾಗಿ ಬಾಲವಾಡಿಗಳು ಇರುವುದಿಲ್ಲ.

ಅನುಬಂಧ—''ಅ''

ತುಮಕೂರು ಜಿಲ್ಲೆ.

ಕ್ರಮ ಸಂಖ್ಯೆ	ತಾಲ್ಲೂಕು ಹೆಸರು	ನೋಂದಣಿ ಆಗಿರುವುದು	ನೋಂದಣಿ ಆಗದಿರುವುದು	ಒಟ್ಟು
೧	೨	೩	೪	೫
೧	ತುಮಕೂರು ಜಿಲ್ಲೆ.			
೧	ತಿಪಟೂರು	೧೧	೧೦	೨೧
೨	ಮಧುಗಿರಿ	೨೩	೧೨	೩೫
		೩೪	೨೨	೫೬